ಓ.ಎಸ್.438/2018
ಡಿ.ಡಬ್ಲ್ಯೂ-2

ದಿನಾಂಕಃ **03.06.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್. ಟಿ. ಟಿ. ವಕೀಲರಿಂದಃ</u>

ಪ್ರತಿವಾದಿಗಳು ನಮ್ಮ ಗ್ರಾಮದವರು ಮತ್ತು ನಮ್ಮ ನೆಟ್ಟರು ಆಗಿರುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೆ ಪ್ರತಿವಾದಿ ಹೊಸದಾಗಿ ಮನೆ ಕಟ್ಟಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ದಾವಾ ಸ್ವತ್ತು ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಮನೆ ಕಟ್ಟಿರುವ ಸ್ವತ್ತಿನ ಖಾತಾ ಸಂಖ್ಯೆ 118/12 ಆಗಿರುತ್ತದೆ ಅದರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಕಟ್ಟುತ್ತಿರುವ ಮನೆಯ ಪೂರ್ವಕ್ಕೆ ನಮಗೆ ಸೇರಿದ ಮನೆ ಇರುತ್ತದೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಲಕ್ಷ್ಮೀನರಸಿಂಹಯ್ಯ ತಂದೆ ಈರನಾಯಕರವರ ಮನೆ, ದಕ್ಷಿಣಕ್ಕೆ ಹಾಲಿನ ಡೈರಿ ಇರುತ್ತದೆ. ಪ್ರತಿವಾದಿ ಮನೆ ಕಟ್ಟಲು ಪರವಾನಗೆ ಪಡೆದುಕೊಂಡಿರುತ್ತಾರೆ. ದಾವಾ ಸ್ವತ್ತಿನ ಖಾತೆ ನಂಬರ್ ವಿಸ್ತೀರ್ಣ ಮತ್ತು ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ.

2. ದಾವಾ ಆಸ್ತಿ ಖಾತೆ ನಂಬರ್ 106 ವಾದಿಯ ತಾತ ಕಲ್ಲಟ್ಟಿ ಭೀಮಪ್ಪರವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಯ ತಾತನ ಕಾಲದಿಂದಲೂ ವಾದಿಯ ಕುಟುಂಬದಸ್ಥರು ಮನೆ ಕಟ್ಟಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಪೂರ್ವಕ್ಕೆ ಗ್ರಾಮ ಠಾಣಾ ಸ್ವತ್ತು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಪ್ರತಿವಾದಿಯ ಮನೆ, ದಕ್ಷಿಣಕ್ಕೆ ಹಾಲಿನ ಡೈರಿ ಈ ಮಧ್ಯೆ ಇರುವಂತಹ ಸ್ವತ್ತು ದಾವಾ ಸ್ವತ್ತು ಆಗಿದ್ದು ವಾದಿಗೆ ಸೇರಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತನ್ನು ಒತ್ತುವರಿ ಮಾಡಿ ಪ್ರತಿವಾದಿ ಮನೆ ಕಟ್ಟಿಕೊಂಡಿರುತ್ತಾರೆ

K.M. Ranganathappa

03/6/2026

ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತನ್ನು ಒತ್ತುವರಿ ಮಾಡಿರುತ್ತಾರೆ ಎಂದು ಗೊತ್ತಿದ್ದರು ಸಹ ಪ್ರತಿವಾದಿಗಳು ನಮ್ಮ ಸಂಬಂಧಿಕರು ಆದ ಕಾರಣ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

K.M. Ranganathappa

ಓ. ಹೇ. ಕೇ. ಸರಿ. ಇದೆ.

03/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ